# ಆಧುನಿಕ ಎಂಡೋಸ್ಕೋಪಿಕ್ ಥೈರಾಯ್ಡ್ ಶಸ್ತ್ರಚಿಕಿತ್ಸೆ

ನಿರಂತರವಾಗಿ ಬದಲಾಗುವ ಜೀವನ ಶೈಲಿಗಳು ಮತ್ತು ಆಧುನಿಕ ಆಹಾರ ಪದ್ಧತಿಯಿಂದಾಗಿ ಥೈರಾಯಿಡ್ ಅಸ್ವಸ್ಥತೆಯು ಹೆಚ್ಚಾಗಿದೆ. ಭಾರತದಲ್ಲಿ, ಒಂದು ಸಮೀಕ್ಷೆಯ ಪ್ರಕಾರ, ಪ್ರತಿ 10 ಮಹಿಳೆಯರಲ್ಲಿ ಒಬ್ಬರು ಥೈರಾಯ್ಡ್ ಕಾಯಿಲೆಗೆ ಒಳಗಾಗುತ್ತಾರೆ ಮತ್ತು ಥೈರಾಯ್ಡ್ ರೋಗದ ಬಗ್ಗೆ ದೂರು ನೀಡುವ ಮಹಿಳೆಯರಲ್ಲಿ ಹೆಚ್ಚಿನವರು 35 ವರ್ಷ ವಯಸ್ಸಿನ ಆಸುಪಾಸಿನವರು.

ಕೆಲವು ಥೈರಾಯ್ಡ್ ರೋಗಗಳಿಗೆ ಚಿಕಿತ್ಸೆಯಾಗಿ ಶಸ್ತ್ರಚಿಕಿತ್ಸೆ ಅಗತ್ಯವಿರುತ್ತದೆ. ಸಂಬಂಧಿತ ಕಾಯಿಲೆಗಳನ್ನು ಗುಣಪಡಿಸುವಲ್ಲಿ ಥೈರಾಯ್ಡ್ ಶಸ್ತ್ರಚಿಕಿತ್ಸೆಗಳು ಬಹಳ ಪರಿಣಾಮಕಾರಿಯಾಗಿದ್ದರೂ, ಅನೇಕ ಮಹಿಳೆಯರು ತಮ್ಮ ಕುತ್ತಿಗೆಯ ಮೇಲೆ ಕೆಟ್ಟದಾದ ಗಾಯದ ಗುರುತು ಕಾಣಬಹುದೆಂಬ ಭಯದಿಂದಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗಲು ಇಷ್ಟಪಡುವುದಿಲ್ಲ.


ಈಗ ಥೈರಾಯ್ಡ್ ಶಸ್ತ್ರಚಿಕಿತ್ಸೆಯ ಅಗತ್ಯವಿರುವ ರೋಗಿಗಳಿಗೆ ಸಮಾಧಾನ ತರುವ ಪರಿಹಾರವೊಂದಿದೆ. ಥೈರಾಯ್ಡ್ ಶಸ್ತ್ರಚಿಕಿತ್ಸೆ ಮತ್ತು ಮಿನಿಮಲ್ ಆಕ್ಸೆಸ್ ಸರ್ಜರಿಯಲ್ಲಿನ (ಎಂಎಎಸ್) ಪ್ರಗತಿಗಳು ಕೆಲವು ಥೈರಾಯ್ಡ್ ಶಸ್ತ್ರಚಿಕಿತ್ಸೆಗಳನ್ನು ಕನಿಷ್ಟ ಪ್ರವೇಶದ (ಮಿನಿಮಲ್ ಆಕ್ಸೆಸ್) ತಂತ್ರಗಳನ್ನು ಬಳಸಿಕೊಂಡು ನಿರ್ವಹಿಸಲು ಅವಕಾಶ ಮಾಡಿಕೊಡುತ್ತವೆ. ಈ ವಿಧಾನಗಳು ಕುತ್ತಿಗೆಯ ಮೇಲೆ ಕೆಟ್ಟದಾದ ಗಾಯದ ಗುರುತಾಗುವ ಸಾಧ್ಯತೆಗಳನ್ನು ಸಂಪೂರ್ಣವಾಗಿ ತಳ್ಳಿಹಾಕುತ್ತವೆ. ಈ ವಿಧಾನಗಳನ್ನು ಮಿನಿಮಲ್ ಆಕ್ಸೆಸ್ ಥೈರಾಯ್ಡ್ ಸರ್ಜರೀಸ್ ಅಥವಾ ಎಂಡೋಸ್ಕೋಪಿಕ್ ಥೈರಾಯ್ಡ್ ಸರ್ಜರಿಗಳು ಎಂದು ಕರೆಯಲಾಗುತ್ತದೆ.

ಸಾಂಪ್ರದಾಯಿಕ ಥೈರಾಯ್ಡ್ ಶಸ್ತ್ರಚಿಕಿತ್ಸೆಯಲ್ಲಿ ಶಸ್ತ್ರಚಿಕಿತ್ಸಕರು ಥೈರಾಯ್ಡ್ ಗ್ರಂಥಿಯನ್ನು ತೆಗೆದುಹಾಕಲು ಕುತ್ತಿಗೆಯಲ್ಲಿ ಮೂರರಿಂದ ನಾಲ್ಕು ಇಂಚು ಆಳವಾದ ಛೇದನವನ್ನು ಮಾಡುತ್ತಿದ್ದರು. ಹೊಲಿಗೆಗಳು ಅಥವಾ ಕ್ಲಿಪ್–ಗಳ ಮೂಲಕ ಗಾಯವನ್ನು ಮುಚ್ಚಲಾಗುತ್ತಿತ್ತು. 24–48 ಗಂಟೆಗಳವರೆಗೆ ಪ್ಲಾಸ್ಟಿಕ್ ಟ್ಯೂಬ್ ಡ್ರೈನ್ ಅನ್ನು ಇಡಲಾಗುತ್ತಿದ್ದು, ನಂತರ ಅಂದರೆ 48–72 ಗಂಟೆಗಳೊಳಗೆ ರೋಗಿಯನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಗುತ್ತಿತ್ತು. ಆದರೆ ಈ ವಿಧಾನದ ಪ್ರಮುಖ ಅನಾನುಕೂಲವೆಂದರೆ ಇದರಿಂದ ಕುತ್ತಿಗೆಯ ಮೇಲೆ ಗಾಯದ ಗುರುತಾಗುತ್ತಿತ್ತು, ಇದು ಕೆಲವು ರೋಗಿಗಳಿಗೆ ದೊಡ್ಡದಾದ ಗಾಯ ಮತ್ತು ಕೆಟ್ಟದಾಗಿ ಕಾಣಲು ಕಾರಣವಾಗುತ್ತಿತ್ತು. ಹೀಗಾಗಿ ಇದು ರೋಗಿಗಳು ಸಾಂಪ್ರದಾಯಿಕ ಥೈರಾಯ್ಡ್ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ಹಿಂಜರಿಯಲು ಒಂದು ಪ್ರಮುಖ ಕಾರಣವಾಗಿತ್ತು.


ಆದರೆ ಈಗ ಎಂಡೋಸ್ಕೋಪಿಕ್ ಥೈರಾಯ್ಡೆಕ್ಟಮಿ ತಂತ್ರಜ್ಞಾನದ ಮೂಲಕ ಶಸ್ತ್ರಚಿಕಿತ್ಸಕರು ಎದೆಯ ಮೂಲಕ ಕುತ್ತಿಗೆಯನ್ನು ತಲುಪುತ್ತಾರೆ, ಹೀಗಾಗಿ ಕುತ್ತಿಗೆಯ ಮೇಲೆ ಯಾವುದೇ ಗಾಯವಾಗಲು ಸಾಧ್ಯವಿಲ್ಲ. ಈ ತಂತ್ರವು ಶಸ್ತ್ರಚಿಕಿತ್ಸಕರಿಗೆ ಕುತ್ತಿಗೆಯಲ್ಲಿರುವ ಥೈರಾಯ್ಡ್ ಊತವನ್ನು ಚರ್ಮದ ಮೇಲೆ ಯಾವುದೇ ಗಾಯದ ಗುರುತಿಲ್ಲದಂತೆ ತೊಡೆದುಹಾಕಲು ಶಕ್ತಗೊಳಿಸುತ್ತದೆ. ಥೈರಾಯ್ಡೆಕ್ಟಮಿ ತಂತ್ರಜ್ಞಾನದ ಸಹಾಯದಿಂದ ದೊಡ್ಡ ಪ್ರಮಾಣದ ಊತಗಳಿಗೆ ಚಿಕಿತ್ಸೆ ಪಡೆಯಬಹುದು. ಬೇರೆ ರೀತಿಯಲ್ಲಿ ಹೇಳುವುದಾದರೆ, ಥೈರಾಯಿಡ್ ಕ್ಯಾನ್ಸರ್ ಪ್ರಕರಣಗಳಾಗಿರಬಹುದಾದಂತಹ ಸಾಮಾನ್ಯವಾಗಿ 6 ಸೆಂಟಿಮೀಟರುಗಳಿಗಿಂತ ದೊಡ್ಡದಾದ ಊತಗಳನ್ನು ಹೊರತುಪಡಿಸಿ, ಹೆಚ್ಚಿನ ಥೈರಾಯ್ಡ್ ರೋಗಗಳಿಗೆ ಗಾಯದ ಗುರುತನ್ನು ಕಡಿಮೆ ಮಾಡುವ ವಿಧಾನವನ್ನು ಬಳಸಿಕೊಂಡು ಚಿಕಿತ್ಸೆ ನೀಡಬಹುದು.

ಬೆಂಗಳೂರಿನ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಫೋರ್ಟಿಸ್ ಹಾಸ್ಪಿಟಲ್ಸ್ ಇತ್ತೀಚಿನ ವಿಧಾನವನ್ನು ಬಳಸಿಕೊಂಡು ಥೈರಾಯ್ಡೆಕ್ಟಮಿಗಳನ್ನು ನಡೆಸುವಲ್ಲಿ ಪರಿಣತಿಯನ್ನು ಹೊಂದಿರುವ ಉತ್ತಮ ತರಬೇತಿ ಪಡೆದ ಸಲಹೆಗಾರರ ತಂಡ, ಮತ್ತು ಸಿಬ್ಬಂದಿಯನ್ನು ಹೊಂದಿದೆ. ಭಾರತದಲ್ಲಿ ಎಂಡೊಸ್ಕೋಪಿಕ್ ಥೈರಾಯ್ಡೆಕ್ಟಮಿ ಮಾಡುವ ಕೆಲವೇ ಕೆಲವು ಶಸ್ತ್ರಚಿಕಿತ್ಸಕರು ಇದ್ದಾರೆ ಎಂಬುದನ್ನು ಗಮನಿಸಬೇಕು. ಮತ್ತು ಭಾರತದಲ್ಲಿ ಎಂಡೋಸ್ಕೋಪಿಕ್ ಥೈರಾಯ್ಡೆಕ್ಟಮಿ ಮಾಡುವ ಕೆಲವೇ ಶಸ್ತ್ರಚಿಕಿತ್ಸಕರಲ್ಲಿ ಡಾ. ಆಶಿಶ್ ಷಾ ಒಬ್ಬರು. ಎಂಡೊಸ್ಕೋಪಿಕ್ ಥೈರಾಯ್ಡೆಕ್ಟಮಿ ನಂತರ ಚೇತರಿಸಿಕೊಳ್ಳುವಿಕೆಯು ಮಹಿಳೆಯರ ನೈಸರ್ಗಿಕ ಸೌಂದರ್ಯದ ಮೇಲೆ ಕನಿಷ್ಠ ಪರಿಣಾಮವನ್ನು ಬೀರುವ ಉನ್ನತ ಶ್ರೇಷ್ಠ ಸೌಂದರ್ಯವರ್ಧಕ ಫಲಿತಾಂಶದೊಂದಿಗೆ ಅಸಾಧಾರಣವಾಗಿ ತ್ವರಿತವಾಗಿದೆ ಎಂದು ಅವರು ಒಂದು ಸಂದರ್ಶನದಲ್ಲಿ ಅಭಿಪ್ರಾಯಪಟ್ಟರು. ಥೈರಾಯಿಡ್ ಊತದ ಸ್ಥಳದಲ್ಲಿ ಉಳಿಯುವ ಗಾಯದ ಗುರುತಿನ ಬಗ್ಗೆ ಅನೇಕ ಮಹಿಳಾ ರೋಗಿಗಳು ಹೆದರುತ್ತಾರೆ. ಎಂಡೋಸ್ಕೋಪಿಕ್ ಥೈರಾಯ್ಡೆಕ್ಟಮಿ ಇಂತಹ ಸೌಂದರ್ಯಪ್ರಜ್ಞೆ ಇರುವ ರೋಗಿಗಳಿಗಾಗಿಯೇ ಇದ್ದು, ಕೀಹೋಲ್ ಛೇದನವನ್ನು ಕಾಣದ ಸ್ಥಳಗಳಲ್ಲಿ (ಭುಜ) ಮಾಡಲಾಗುತ್ತದೆ ಮತ್ತು ಒಮ್ಮೆ ಅವು ವಾಸಿಯಾದ ನಂತರ ಯಾವುದೇ ಗಾಯದ ಗುರುತು ಉಳಿಯುವುದಿಲ್ಲ.

ಡಾ. ಆಶಿಶ್ ಷಾರವರ ಇತ್ತೀಚಿನ ರೋಗಿಗಳ ಪೈಕಿ ಒಬ್ಬರ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ನಲವತ್ತೆರಡು ವರ್ಷ ವಯಸ್ಸಿನ ಶ್ರೀಮತಿ ಶ್ವೇತಾ ರಾವ್ (ಹೆಸರು ಬದಲಾಯಿಸಲಾಗಿದೆ) ವಿವಾಹಿತ ಗೃಹಿಣಿಯಾಗಿದ್ದಾರೆ. ಶಸ್ತ್ರಚಿಕಿತ್ಸೆಯ ನಂತರ ಇವರ ಸೌಂದರ್ಯದ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆ ಚಿಂತಿಸುತ್ತಿದ್ದರು. ಆದರೆ ಇಂದು ಅವರು ಡಾ. ಆಶೀಶ್ ಷಾರವರ ತಜ್ಞ ಆರೈಕೆಯಡಿಯಲ್ಲಿ ನಡೆಸಿದ ಎಂಡೋಸ್ಕೋಪಿಕ್ ಥೈರಾಯ್ಡೆಕ್ಟಮಿ ಮೂಲಕ ಥೈರಾಯ್ಡ್ ಅಸ್ವಸ್ಥತೆಯನ್ನು ಯಶಸ್ವಿಯಾಗಿ ಗೆದ್ದು ಸಂತೋಷದಲ್ಲಿದ್ದಾರೆ. ಶಸ್ತ್ರಚಿಕಿತ್ಸೆಯ ನಂತರ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಶ್ರೀಮತಿ ರಾವ್ ಅವರನ್ನು ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಲಾಯಿತು ಮತ್ತು ಒಂದು ವಾರದೊಳಗೆ ಸಾಮಾನ್ಯ ಜೀವನವನ್ನು ಪ್ರಾರಂಭಿಸಿದರು.



ಸಾಂಪ್ರದಾಯಿಕ ಥೈರಾಯ್ಡ್ ಶಸ್ತ್ರಚಿಕಿತ್ಸೆ



ಎಂಡೋಸ್ಕೋಪಿಕ್ ಥೈರಾಯ್ಡ್ ಶಸ್ತ್ರಚಿಕಿತ್ಸೆ

**ಎಂಡೋಸ್ಕೋಪಿಕ್ ಥೈರಾಯ್ಡೆಕ್ಟಮಿ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಬೆಂಗಳೂರು ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯ ಫೋರ್ಟಿಸ್ ಆಸ್ಪತ್ರೆಗೆ ಭೇಟಿ ಮಾಡಿ.**

**ನಮಗೆ ಕರೆ ಮಾಡಿ: 99803 30099**

Fortis

ಎರಡನೆಯ ಅಭಿಪ್ರಾಯಕ್ಕಾಗಿ

78923 21486